ದಿನಾಂಕಃ 25-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ</u>

ನಾನು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

1. ಪ್ರ.ವ.ವ. ದೃಢಿಕೃತ ನಕಲು ನಿಪಿ-1
2. ದೂರಿನ ದೃಢಿಕೃತ ನಕಲು ನಿಪಿ-2
3. ಐ.ಎಂ.ವಿ.ಕಲಂನಲ್ಲಿಕೊಟ್ಟ ನೋಟಿಸಿನ ದೃಢಿಕೃತ ನಕಲು ನಿಪಿ-3
4. ಇನಕ್ವೆಸ್ಟ ಪಂಚನಾಮೆಯ ದೃಢಿಕೃತ ನಕಲು ನಿಪಿ-4
5. ನನ್ನ ಮಗ ತೇಜಸ ಈತನು ಪೊಲೀಸರಿಗೆ ಕೊಟ್ಟ ಹೇಳಿಕೆ ದೃಢಿಕೃತ ನಕಲು ನಿಪಿ-5
6. ನನ್ನ ಮಗನ ಸ್ನೇಹಿತ ಪೊಲೀಸರಿಗೆ ಕೊಟ್ಟ ಹೇಳಿಕೆಯ ದೃಡಿಕೃತ ನಕಲು ನಿಪಿ-6
7. ವಾಹನದ ಮಾಲಿಕ ಪೊಲೀಸರಿಗೆ ಕಲಂ 133 ನೋಟಿಸಿಗೆ ಕೊಟ್ಟ ಉತ್ತರದ ದೃಡಿಕೃತ ನಕಲು ನಿಪಿ-7
8. ಪಿಎಂ ವರದಿಯ ದೃಡಿಕೃತ ನಕಲು ನಿಪಿ-8
9. ವಾಹನ ಬಿಡುಗಡೆಯ ಪಂಚನಾಮೆಯ ದೃಡಿಕೃತ ನಕಲು ನಿಪಿ-9
10. ಐ.ಎಂ.ವಿ. ವರದಿಯ ದೃಢಿಕೃತ ನಕಲು ನಿಪಿ-10
11. ಇನ್ನೊಂದು ಐ.ಎಂ.ವಿ. ವರದಿಯ ದೃಢಿಕೃತ ನಕಲು ನಿಪಿ-11
12. ನನ್ನ ಮಗನ ಸ್ನೇಹಿತ ಸನತ ಈತನ ಗಾಯದ ಪ್ರಮಾಣ ಪತ್ರದ ದೃಢಿಕೃತ ನಕಲು ನಿಪಿ-12
13. ನನ್ನ ಮಗನ ಸ್ನೇಹಿತ ಮಲ್ಲಿಕಾರ್ಜುನ ಈತನ ಗಾಯದ ಪ್ರಮಾಣ ಪತ್ರದ ದೃಢಿಕೃತ ನಕಲು ನಿಪಿ-13

14. ನನ್ನ ಮಗನ ಸ್ನೇಹಿತ ಸುಧಿಂದ್ರ ಈತನ ಗಾಯದ ಪ್ರಮಾಣ ಪತ್ರದ ದೃಢಿಕೃತ ನಕಲು ನಿಪಿ–14
15. ಐದು ಜನ ಸಾಕ್ಷಿದಾರರು ಕೊಟ್ಟ ಹೇಳಿಕೆಗಳು ದೃಢಿಕೃತ ನಕಲು ಒಟ್ಟಾರೆ ನಿಪಿ–15
16. ದೋಷಾರೋಪಣ ಪತ್ರದ ದೃಢಿಕೃತ ನಕಲು ನಿಪಿ–16
17. ನನ್ನ ಮಗನ ಕಂಪನಿಯವರು ಕೊಟ್ಟ 2020 ಫೆಬ್ರುವರಿ ತಿಂಗಳ ಪೇ ಸ್ಲೀಪ ನಿಪಿ–17
18. ನನ್ನ ಮಗನ ಕಂಪನಿಯವರು ಕೊಟ್ಟ 2020 ಏಪ್ರಿಲ ತಿಂಗಳ ಪೇ ಸ್ಲೀಪ ನಿಪಿ–18

ಕಾರಣ, ಅರ್ಜಿಯಲ್ಲಿ ಕೇಳಿದಂತೆ ಪರಿಹಾರಕ್ಕೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೆನೆ.

ಪಾಟೀ ಸವಾಲುಃ ಎದುರುದಾರ ಪರ ಮಾನ್ಯ ವಕೀಲರಿಂದಃ

ಎದುರುದಾರರ ಪರ ಮಾನ್ಯ ವಕೀಲರು ವೇಳೆ ಕೋರಿದ್ದು, ವೇಳೆ ಮಂಜೂರು ಮಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕಃ 07-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 6ನೇ ಎದುರುದಾರ ಪರ ಮಾನ್ಯ ವಕೀಲರಿಂದಃ

ನಾನು ಡಿಪ್ಲೋ ಮಾಡಿ ವಿದ್ಯಾಭ್ಯಾಸ ಮಾಡಿದ್ದೆನೆ. ಈ ಅರ್ಜಿಯನ್ನು ಹಾಕಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೆನು. ನನಗೆ ಈ ಕೇಸಿನಲ್ಲಿ ಹಾಜರು ಮಾಡಿದ ದಾಖಲೆಗಳ ಮಾಹಿತಿ ಇದೆ. ನನ್ನ ಮಗನ ತಪ್ಪಿನಿಂದ ಅಪಘಾತವಾಗಿದೆ ಎಂದು ಪ್ರವವ ಯಲ್ಲಿ ನಮೂದು ಆಗಿದೆ ಎಂದರೆ ಸಾಕ್ಷಿಯು ಸುಳ್ಳಾಗಿ ನಮೂದು ಆಗಿದೆ ಎನ್ನುತ್ತಾರೆ. ನನ್ನ ಮಗ ಚಲಾಯಿಸುತ್ತಿದ್ದ ಮೋಟರ ಸೈಕಲ ನಂ.ಕೆಎ-06/ಎಚಎ-5049. ಪೊಲೀಸರು ಸಲ್ಲಿಸಿದ ದೋಷಾರೋಪಣಾ ಪತ್ರದಲ್ಲಿ 1 ಮತ್ತು 3ನೇ ಎದುರುದಾರರ ವಾಹನ ನನಗೆ ಡಿಕ್ಕಿ ಮಾಡಿ ಅಪಘಾತವಾಗಿದೆ ಎಂದು ನಮೂದು ಮಾಡಿದ್ದಾರೆ ಎಂದರೆ ನಿಜ. ನಾವು ಈ ಕೇಸಿನಲ್ಲಿ ಎದುರುದಾರ ನಂ.5 ಮತ್ತು 6 ರವರ ಮೇಲೆ ಪರಿಹಾರದ ಹಣ ಕೇಳಿಲ್ಲ ಎಂದರೆ ನಿಜ. ಎದುರುದಾರ ನಂ. 1 ರಿಂದ 4 ರವರ ವಿರುದ್ಧ ಪರಿಹಾರದ ಹಣ ಕೊಡುವಂತೆ ಕೇಳಿದ್ದೆವೆ ಎಂದರೆ ನಿಜ.

**ಪಾಟೀ ಸವಾಲುಃ ಉಳಿದ ಎದುರುದಾರ ಪರ ಮಾನ್ಯ ವಕೀಲರಿಂದಃ**

2 ಮತ್ತು 4ನೇ ಎದುರುದಾರರ ಪರ ಮಾನ್ಯ ವಕೀಲರು ವೇಳೆ ಕೋರಿದ್ದು, ವೇಳೆ ಮಂಜೂರು ಮಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕಃ 03-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

1) 2021-22 ನೇ ಸಾಲಿನ ಫಾರಂ ನಂ.16 ನಿಪಿ-19

2) ನನ್ನ ಐಡಿ ಕಾರ್ಡಿನ ಜೆರಾಕ್ಸ ಪ್ರತಿ ನಿಪಿ-20

(ಮೂಲ ಐಡಿ ಕಾರ್ಡ ತಾಳೆ ಮಾಡಿ ವಾಪಸ ನೀಡಲಾಗಿದೆ)

3) ಸರ್ವಿಸ ಸರ್ಟಿಫಿಕೇಟನ ಕಂಪ್ಯೂಟರ ಜನರೇಟೆಡ ಪ್ರತಿ ನಿಪಿ-21

ಪಾಟೀ ಸವಾಲುಃ 2ನೇ ಎದುರುದಾರರ ಪರ ವಕೀಲರು ವೇಳೆ ಕೋರಿದ್ದು ವೇಳೆ

ಮಂಜೂರು ಮಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,

ಬೆಳಗಾವಿ.

ದಿನಾಂಕಃ 22-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1,3 ಮತ್ತು 5ನೇ ಎದುರುದಾರರ ಪರ ವಕೀಲರಿಂದಃ

ಈ ಅಪಘಾತದಲ್ಲಿ ಮೃತ ಪಟ್ಟ ಸುಶಾಂತ ನನ್ನ ಮಗ. ಈ ಅಪಘಾತವಾದಾಗ ನಾನು ನನ್ನ ಊರಾದ ಬೇಟಗೇರಿಯಲ್ಲಿ ಇದ್ದೆನು.ನನಗೆ ಈ ಅಪಘಾತದ ಬಗ್ಗೆ ಬೆಳಗಿನ ಜಾವ ನನ್ನ ಮಗನ ಸ್ನೇಹಿತರು ಫೋನ ಮಾಡಿ ತಿಳಿಸಿದರು. ನನ್ನ ಮಗ ಮತ್ತು ಆತನ ಸ್ನೇಹಿತರು ಸೇರಿ ಒಟ್ಟು 9 ಜನ ಜೋಗಫಾಲ್ಸ ನೋಡಲೆಂದು ಬೆಂಗಳೂರಿನ ನೆಲಮಂಗಲದಿಂದ ಮೋಟರ ಸೈಕಲನಲ್ಲಿ ಹೋಗುವಾಗ ಈ ಅಪಘಾತ ಆಯಿತು. ಮೋಟರ ಸೈಕಲನ ಚಾಲಕರು ಎಲ್ಲರೂ ಹೆಲಮೆಟ ಧರಿಸಿದ್ದರು. ಈ ಅಪಘಾತ ದಿನಾಂಕ 15.08.2020 ರಂದು ಮುಂಜಾನೆ 05.20 ಗಂಟೆಗೆ ಆಯಿತು. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಈ ಅಪಘಾತ ಮುಂಜಾನೆ 05.45 ಗಂಟೆಗೆ ಆಗಿದೆ ಎಂದು ಹೇಳಿದ್ದೀರಿ ಎಂದರೆ ಸಾಕ್ಷಿಯು ಈ ಅಪಘಾತ 05.45 ಗಂಟೆಗೆ ಆಗಿದೆ ಎನ್ನುತ್ತಾರೆ. ಈ

ಅಪಘಾತವು ದೇವಪೂರಹಟ್ಟಿಯಲ್ಲಿ ಚಿತ್ರದುರ್ಗ ಹೊಳಲಕೆರೆ ರಸ್ತೆಯಲ್ಲಿ ಆಯಿತು. ನನ್ನ ಮಗನು ಮೋಟರ ಸೈಕಲನ್ನು ಜಾಗರೂಕತೆಯಿಂದ ಚಲಾಯಿಸುತ್ತಿದ್ದನು. ನನ್ನ ಮಗ ಮೋಟರ ಸೈಕಲನ್ನು ರಸ್ತೆಯ ದಿಬ್ಬದ ಮೇಲೆ ವೇಗವಾಗಿ ಚಲಾಯಿಸಿಕೊಂಡು ಹೋಗಿದ್ದರಿಂದ ಮೋಟರ ಸೈಕಲ ತಾನಾಗಿ ಬಿದ್ದು ನಂತರ ಒಂದರಮೆಲೊಂದು ಮೋಟರ ಸೈಕಲ ಬಿದ್ದು ಅಪಘಾತ ಆಯಿತು ಎಂದರೆ ಸರಿಯಲ್ಲ. ಸುಧಿಂದ್ರ ಕುಲಕರ್ಣಿ ಇವರು ಪೊಲೀಸರಿಗೆ ಸುಳ್ಳು ದೂರನ್ನು ಕೊಟ್ಟಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಎದುರುದಾರ ನಂ.1 ಮತ್ತು 5 ರವರ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿರುತ್ತಾರೆ. ಎದುರುದಾರ ನಂ.1 ಮತ್ತು 5 ರವರನ್ನು ಈ ಅಪಘಾತಕ್ಕೆ ಸಂಬಂಧ ಪಟ್ಟಂತೆ ಕ್ರಿಮಿನಲ್ ಕೇಸಿನಲ್ಲಿ ನ್ಯಾಯಾಲಯವು ದೋಷ ಮುಕ್ತ ಗೊಳಿಸಿ ಬಿಡುಗಡೆ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನಿಮ್ಮ ಮಗನಿಗೆ ಒಂದು ಕೋಟಿಯ ಪ್ಯಾಕೇಜ ಕೆಲಸ ಸಿಗುತ್ತದೆ ಎಂದು ಹೇಳಲು ದಾಖಲೆಗಳನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಆ ದಾಖಲೆ ಹಾಜರು ಮಾಡಿಲ್ಲ ಎನ್ನುತ್ತಾರೆ. ನನ್ನ ಮಗನಿಗೆ ಕಂಪನಿಯಲ್ಲಿ ತಿಂಗಳಿಗೆ

ರೂ.59,590/- ಸಂಬಳ ಇತ್ತು. ಆತನ ಸಂಬಳದಲ್ಲಿ ಕಡಿತ ಮಾಡಿ ಎಷ್ಟು ಸಂಬಳ ಸಿಗುತ್ತಿತ್ತು ಎಂದರೆ ಸಾಕ್ಷಿಯು ರೂ.40,000/- ಚಿಲ್ಲರೆ ಹಣ ಸಂಬಳ ಸಿಗುತ್ತಿತ್ತು ಎನ್ನುತ್ತಾರೆ. ನನ್ನ ಮಗನೇ ಮೋಟಾರ ಸೈಕಲನಲ್ಲಿ ವೇಗವಾಗಿ ಹೋಗುವಾಗಆತನೇ ಸ್ಕೀಡ ಆಗಿ ಬಿದ್ದು ಮೃತ ಪಟ್ಟಿದ್ದರು ಸಹ ಹೆಚ್ಚಿ ನ ಪರಿಹಾರದ ಹಣವನ್ನು ಪಡೆಯುವ ಉದ್ದೇಶದಿಂದ ನಾವು ಸುಳ್ಳು ಕ್ರಿಮಿನಲ್ ಕೇಸನ್ನು ಹಾಕಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**4ನೇ ಎದುರುದಾರರ ಪರ ವಕೀಲರು ವೇಳೆ ಕೋರಿದ್ದು, ವೇಳೆ ಮಂಜೂರು ಮಾಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,

ಬೆಳಗಾವಿ.

ದಿನಾಂಕಃ 25-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರು ಗೈರು ಹಾಜರು ಇದ್ದು ಎದುರುದಾರರ ನಂ 2 ಮತ್ತು 4 ರವರ ಮಾನ್ಯ ವಕೀಲರು ಗೈರು ಹಾಜರು ಇದ್ದು, 2 ಮತ್ತು 4 ನೇ ಎದುರುದಾರರ ಪರ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕಃ 05-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 4ನೇ ಎದುರುದಾರರ ಪರ ಮಾನ್ಯ ವಕೀಲರಿಂದಃ

ನಾನು ಡಿಪ್ಲೋಮಾ ಮುಗಿಸಿರುತ್ತೇನೆ. ನಾನು ಔಷಧ ಅಂಗಡಿಯನ್ನು ನಡೆಸುತ್ತಿದ್ದೇನೆ. ಔಷಧ ಅಂಗಡಿಯಿಂದ ನನಗೆ ತಿಂಗಳಿಗೆ 15,000/- ರಿಂದ 20,000/- ಆದಾಯ ಇದೆ. ನನಗೆ ಮೃತ ಸುಶಾಂತ ಮತ್ತು ತೇಜಸ ಇಬ್ಬರೂ ಮಕ್ಕಳು. ತೇಜಸ ಇತನು ಇಂಜೀನಿಯರ ಮುಗಿಸಿ ಕೆಲಸ ಮಾಡುತ್ತಿದ್ದಾನೆ. ನಾನು ಅಪಘಾತವನ್ನು ಪ್ರತಕ್ಷ ನೋಡಿರುವುದಿಲ್ಲ ಎಂದರೆ ನಿಜ. ಈ ಅಪಘಾತವು ದಿನಾಂಕ 15-08-2020 ರಂದು ಬೆಳಗಿನ ಜಾವ 5.45 ಗಂಟೆಗೆ ಆಗಿದೆ. ನನ್ನ ಮಗ ಬೆಂಗಳೂರಿನಿಂದ ಶಿವಮೊಗ್ಗದ ಜೋಗ ಪಾಲ್ಸ ನೋಡಲು ಹೋಗುತ್ತಿದ್ದಾಗ ಈ ಅಪಘಾತವಾಯಿತು. ಬೆಂಗಳೂರಿನಿಂದ ಜೋಗಪಾಲ್ಸ 300 ಕೀ ಮೀ ದೂರ ಇದೆ ಎಂದರೆ ನಿಜ. ನನ್ನ ಮಗ ರಾತ್ರಿ 2.00 ಗಂಟೆಗೆ ಬೆಂಗಳೂರಿಗೆ ಹೊರಟು ಜೋಗಪಾಲ್ಸ

ಕಡೆಗೆ ಹೊರಟ್ಟಿದ್ದನು . ನನ್ನ ಮಗನ ಜೊತೆ ಉಳಿದ ಮೋಟರ ಸೈಕಲ ಮೇಲೆ ನನ್ನ ಮಗ ಸೇರಿ ಒಟ್ಟು 9 ಜನ ಹೋಗುತ್ತಿದ್ದರು . 4 ಮೋಟರ ಸೈಕಲ ನಲ್ಲಿ ತಲಾ ಇಬ್ಬರಂತೆ ಹೋಗುತ್ತಿದ್ದು ಒಂದು ಮೋಟರ ಸೈಕಲನಲ್ಲಿ ನನ್ನ ಮಗ ಒಬ್ಬನೇ ಹೋಗುತ್ತಿದ್ದನು ಹೀಗೆ ಒಟ್ಟು 9 ಜನ ಹೋಗುತ್ತಿದ್ದರು. ಈ ಅಪಘಾತವಾದ ತಕ್ಷಣ ನನ್ನ ಮಗನ ಸ್ನೇಹಿತ ಸುರೇಂದ್ರ ಕುಲಕರ್ಣಿ ಚಿತ್ರದುರ್ಗದ ಪೊಲೀಸ ಠಾಣೆಗೆ ದೂರು ಕೊಟ್ಟಿದ್ದನು ಎಂದರೆ ನಿಜ. ಆ ದೂರಿನಲ್ಲಿ ನಿಮ್ಮ ಮಗನೇ ರಸ್ತೆ ದಿಬ್ಬದಲ್ಲಿ ಮೋಟರ ಸೈಕಲನ್ನು ಜೋರಾಗಿ ಓಡಿಸಿ ಬಿದ್ದು ಏಟು ಮಾಡಿಕೊಂಡಿದ್ದಾನೆ ಎಂದು ನಮೂದಿಸಿದ್ದಾರೆ ಎಂದರೆ ಸಾಕ್ಷಿ ಆ ರೀತಿ ನಮೂದಿಸಿದ್ದು ಸುಳ್ಳು ಎನ್ನುತ್ತಾರೆ. ಈ ಅಪಘಾತದಲ್ಲಿ ನನ್ನ ಮಗನಿಗೆ ಹೊರತುಪಡಿಸಿ ಆತನ ಸ್ನೇಹಿತರಿಗೆ ಯಾರಿಗೂ ಏರು ಆಗಿಲ್ಲ ಎಂದರೆ ಸರಿಯಲ್ಲ. ಒಟ್ಟು 3 ಜನರಿಗೆ ಏಟು ಆಗಿದೆ. ನನ್ನ ಮಗ ವೇಗವಾಗಿ ಮೋಟರ ಸೈಕಲ ಚಲಾಯಿಸಿಕೊಂಡು ಹೋಗಿ ರಸ್ತೆ ದಿಬ್ಬದಲ್ಲಿ ಬಿದ್ದ ನಂತರ ಹಿಂದಿನಿಂದ ಬರುತ್ತಿದ್ದ ನನ್ನ ಮಗನ ಸ್ನೇಹಿತನ ಮೋಟರ ಸೈಕಲ ನಂತರ ಡಿಕ್ಕಿ ಆಯಿತು ಎಂದರೆ ಸರಿಯಲ್ಲ. ನಿಪಿ 12 ಮತ್ತು ನಿಪಿ 13 ರಲ್ಲಿ ಗಾಯದ ಪ್ರಮಾಣ ಪತ್ರದಲ್ಲಿ ನನ್ನ

ಮಗನ ಮೋಟರ ಸೈಕಲಿಗೆ ಬೇರೆ ಮೋಟರ ಸೈಕಲ ಡಿಕ್ಕಿ ಮಾಡಿದ ಬಗ್ಗೆ ನಮೂದನೆ ಇಲ್ಲಾ ಎಂದರೆ ಸರಿಯಲ್ಲ. ಈ ಅಪಘಾತದ ಬಗ್ಗೆ ನನಗೆ ಪೊಲೀಸರು ಪೋನ ಮಾಡಿ ಹೇಳಿದರು. ನಾನು ಆಸ್ಪತ್ರೆಯ ಶವಗಾರಕ್ಕೆ ಹೋದಾಗ ನನ್ನ ಮಗನ ಸ್ನೇಹಿತರು ಅಲ್ಲಿ ಇದ್ದರು. ನಾನು ಆಸ್ಪತ್ರೆಯ ಶವಗಾರದಲ್ಲಿ ಮಗನ ಸ್ನೇಹಿತರನ್ನು ಕೇಳಿದಾಗ ಅವರು ಅಪಘಾತದ ಬಗ್ಗೆ ಸರಿಯಾಗಿ ಉತ್ತರ ಕೊಟ್ಟಿಲ್ಲ. ಈ ಅಪಘಾತವನ್ನು ಪ್ರವೀಣಕುಮಾರ ಸ್ವತಂತ್ರ ಸಾಕ್ಷಿದಾರರು ನೋಡಿರುತ್ತಾರೆ. ಪೊಲೀಸರು ಪ್ರವೀಣಕುಮಾರ ಇತನ ಹೇಳಿಕೆ ಪಡೆದಿದ್ದರೂ ಇಲ್ಲವೋ ಎಂದು ನನಗೆ ಗೊತ್ತಿಲ್ಲ . ನಾನು ಪ್ರವೀಣಕುಮಾರನಲ್ಲಿ ಆತ ಪೊಲೀಸರಲ್ಲಿ ಹೇಳಿಕೆ ಕೊಟ್ಟಿದನೋ ಇಲ್ಲವೋ ಎಂದು ಕೇಳಿಲ್ಲ . ನಾನು ಪ್ರತ್ಯಕ್ಷದರ್ಶಿಗಳನ್ನು ಸಾಕ್ಷಿ ವಿಚಾರಣೆ ಮಾಡಿಸುತ್ತೇನೆ. ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ. ಈ ಅಪಘಾತವು ನನ್ನ ಮಗನ ತಪ್ಪಿನಿಂದ ಆಗಿತ್ತು ಎಂದರೆ ಸರಿಯಲ್ಲ. ನಾನು ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಈ ಅಪಘಾತವು ನನ್ನ ಮಗನ ಸ್ನೇಹಿತರ ತಪ್ಪಿನಿಂದ ಆಗಿದೆ ಎಂದು ಪೊಲೀಸರ ಜೊತೆ ಶಾಮೀಲು ಆಗಿ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ

ಚಲಾಯಿಸುತ್ತಿದ್ದ ಮೋಟರ ಸೈಕಲ ಆತನ ಸ್ನೇಹಿತ ಭರತಕುಮಾರಿಗೆ ಸೇರಿದ್ದು . ನನ್ನ ಮಗನಿಗೆ ಮೋಟರ ಸೈಕಲ ಚಲಾಯಿಸಲು ಡ್ರೈವಿಂಗ ಲೆಸನ್ಸ ಇದೆ ಎಂದು ತೋರಿಸಲು ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನನ್ನ ಮಗನಿಗೆ ಡಿ ಎಲ್ ಇಲ್ಲದೆ ಇದ್ದರೂ ಡಿ ಎಲ್ ಇತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಚಲಾಯಿಸುತ್ತಿದ್ದ ಮೋಟರ ಸೈಕಲ 160 ಸಿಸಿ ಮೋಟರ ಸೈಕಲ. ಆ ಮೋಟರ ಸೈಕಲ ತುಂಬಾ ವೇಗವಾಗಿ ಚಲಾಯಿಸುಬಹುದು ಎಂದರೆ ನಿಜ. ಸಾಕ್ಷಿ ಮುಂದುವರೆದು ನನ್ನ ಮಗ ನಿಧಾನವಾಗಿ ಚಲಾಯಿಸುತ್ತಿದ್ದನು ಎನ್ನುತ್ತಾರೆ. ನನ್ನ ಮಗನು ಅಪಘಾತ ಸಮಯದಲ್ಲಿ ಹೆಲ್ಮೆಟ ಧರಿಸಿದ್ದನು . ನನ್ನ ಮಗ ತಲೆಗೆ ಏಟಾಗಿ ಮೃತ ಪಟ್ಟನು ಎಂದರೆ ಸರಿಯಲ್ಲ. ನನ್ನ ಮಗ ಹೆಲ್ಮೆಟ ಧರಿಸಿದ್ದರೆ ಆತ ಮೃತ ಪಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಅಪಘಾತವು ನನ್ನ ಮಗನ ತಪ್ಪಿನಿಂದ ಆಗಿದ್ದರಿಂದ ಎದುರುದಾರರ ಪರಿಹಾರದ ಹಣ ಕೊಡಲು ಭಾದ್ಯಸ್ಥರು ಅಲ್ಲಾ ಎಂದರೆ ಸರಿಯಲ್ಲ. ನನ್ನ ಮಗನ ಅಂತ್ಯಸಂಸ್ಕಾರಕ್ಕೆ 50,000/- ಖರ್ಚು ಆಯಿತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಸುಶಾಂತ ಡಿಪ್ಲೋಮಾ

ಮಾಡಿದ್ದನು . ಆ ರೀತಿ ಡಿಪ್ಲೋಮಾ ಮಾಡಿದ್ದನು ಎಂದು ತೋರಿಸಲು ದಾಖಲೆ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನನ್ನ ಮಗನ ಪ್ಯಾನ ಕಾರ್ಡ , ಆಧಾರ ಕಾರ್ಡ ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲಾ ಎಂದರೆ ನಿಜ. ನನ್ನ ಮಗ ಕಿಲೊಸ್ಕರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಅಪಾಯಿಂಟಮೆಂಟ ಲೇಟರ ಹಾಜರು ಮಾಡಿಲ್ಲ ಆದರೆ ವೇತನ ಸ್ಲಿಪ ಹಾಜರು ಮಾಡಿದ್ದೇನೆ. ನನ್ನ ಮಗನಿಗೆ ಪ್ರತಿ ತಿಂಗಳು 59,590/- ಸಂಬಳ ಬರುತ್ತಿತ್ತು ಎಂದು ತೋರಿಸಲು ಆತನ ಬ್ಯಾಂಕ ಖಾತೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನನ್ನ ಮಗ ಕಿಲೋಸ್ಕರ ಕಂಪನಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಾದ ನಾವು ನನ್ನ ಮಗನ ಆದಾಯವನ್ನು ಅವಳಂಬಿತ ಆಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ಯಾರಾ ನಂಬರ 9 ರಿಂದ 11 ರಲ್ಲಿ ಹೇಳಿದ ಎಲ್ಲ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಸುದೇಂದ್ರ , ಸನತಕುಮಾರ , ಮಲ್ಲಿಕಾರ್ಜುನ ಇವರು ಮೂರು ಜನ ಸೇರಿ ನನ್ನ ಮಗನ ವಿರುದ್ಧ ಸುಳ್ಳು ದೂರು ಕೊಟ್ಟಿದ್ದಾರೆ ಎಂದು ಹೇಳಲು ನಾನು ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಯಾವ ಯಾವ ಮೋಟರ ಸೈಕಲ

ಮೇಲೆ ಯಾರು ಯಾರು ಹೋಗುತ್ತಿದ್ದರು ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಮಗನ ಮೂರು ಜನ ಸ್ನೇಹಿತರು ಹೋಗುತ್ತಿದ್ದ ಮೋಟರ ಸೈಕಲ ಗೊತ್ತು ಆದರೆ ಇತರರ ಮೋಟರ ಸೈಕಲ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ತನಿಖಾಧಿಕಾರಿಗಳು ಪಡೆದ ಸಾಕ್ಷಿದಾರರ ಹೇಳಿಕೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ನಿಜ. ಈ ಅಪಘಾತವು ನನ್ನ ಮಗನ ತಪ್ಪಿನಿಂದ ಆಗಿದ್ದರೂ ಸಹ ನಾನು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ</u>

ನಾನು ಡಿಪ್ಲೋಮಾ ಮಾಡಿರುತ್ತೇನೆ. ಈ ಅರ್ಜಿ ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ ಎಂದರೆ ನಿಜ. ಈ ಕೇಸಿನಲ್ಲಿ ಹಾಜರು ಮಾಡಿದ ದಾಖಲೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ನಿಜ. ಎದುರುದಾರರ ನಂ 2 ಮತ್ತು 4 ರವರು ಏನು ತಕರಾರು ಹಾಕಿದ್ದಾರೆ ಎಂದು ನಾನು ವಕೀಲರನ್ನು ಕೇಳಿ ತಿಳಿದುಕೊಂಡಿದ್ದೇನೆ ಎಂದರೆ ನಿಜ. ನಾನು ಅಪಘಾತ ಸ್ಥಳಕ್ಕೆ 4 ದಿನ ಬಿಟ್ಟು

ಹೋಗಿದ್ದೇನು. ನನ್ನ ಮಗ 5 ವರ್ಷದಿಂದ ಬೆಂಗಳೂರಿನಲ್ಲಿ ಇದ್ದನು . ನನ್ನ ಮಗ ಸುಶಾಂತ ಆತನ ಸ್ವಂತ ಮೋಟರ ಸೈಕಲ ಹೊಂದಿದ್ದನು ಅದು ಸರಿ ಇಲ್ಲದೆ ಇದ್ದುದರಿಂದ ಆತನ ಸ್ನೇಹಿತನ ಮೋಟರ ಸೈಕಲ ಉಪಯೋಗಿಸಿದ್ದನು. ನನ್ನ ಮಗನ ಸ್ವಂತ ಮೋಟರ ಸೈಕಲ ಇತ್ತು ಎಂದು ತೋರಿಸಲು ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನನ್ನ ಮಗನಿಗೆ ಮೋಟರ ಸೈಕಲ ಚಲಾಯಿಸಲು ಲೆನಸ್ಸ ಇಲ್ಲದೆ ಇದ್ದುದರಿಂದ ಆತನಿಗೆ ಸರಿಯಾಗಿ ಮೋಟರ ಸೈಕಲ ಚಲಾಯಿಸಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಭರತಕುಮಾರ, ಸನತಕುಮಾರ ಮತ್ತು ಮಲ್ಲಿಕಾರ್ಜುನ ಇವರುಗಳು ನನ್ನ ಮಗ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಉಳಿದ ಸ್ನೇಹಿತರು ಇನ್ನೊಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಮಗನ ತಪ್ಪಿನಿಂದ ಅಪಘಾತವಾಗಿದೆ ಎಂದು ದೂರಿನಲಲಿ ಬರೆಯಲಾಗಿದೆ ಎಂದರೆ ಸಾಕ್ಷಿ ಆ ರೀತಿ ಸುಳ್ಳಾಗಿ ಬರೆಯಲಾಗಿದೆ ಎನ್ನುತ್ತಾರೆ. ಸುದೇಂದ್ರ ಕುಲಕರ್ಣಿ ಸುಳ್ಳು ದೂರು ಕೊಟ್ಟಿದನು ಎಂದು ಆತನ ವಿರುದ್ಧ ಕ್ರಮ ಕೈಗೊಳ್ಳುವಂತೆ ನಾನು ಪೊಲೀಸರಿಗೆ ದೂರು ಕೊಟ್ಟಿಲ್ಲ. ಈ ಅಪಘಾತವು ನನ್ನ ಮಗನ ತಪ್ಪಿನಿಂದ ಆಗಿದ್ದರಿಂದ ನಾನು

ಸುದೇಂದ್ರ ಕುಲಕರ್ಣಿ ಇತನ ವಿರುದ್ಧ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಚಿತ್ರದುರ್ಗ ಜೆ ಎಮ್ ಎಫ ಸಿ ನ್ಯಾಯಾಲಯದಲ್ಲಿ ಸುದೇಂದ್ರ ಕುಲಕರ್ಣಿ ವಿರುದ್ಧ ದೂರು ಸಲ್ಲಿಸಿಲ್ಲ. ಸುದೇಂದ್ರ ಕುಲಕರ್ಣಿ ಇತನು ಸುಳ್ಳಾಗಿ ಪೊಲೀಸರಿಗೆ ದೂರು ಕೊಟ್ಟಿದ್ದಾನೆ ಎಂದು ಹೇಳಲು ನಾನು ಅದನ್ನು ಇದುವರೆಗೂ ಪ್ರಶ್ನಿಸಿಲ್ಲ ಎಂದರೆ ನಿಜ. ಈ ಅಪಘಾತವು ನನ್ನ ಮಗನ ತಪ್ಪಿನಿಂದಲೇ ಆತನೇ ಮೋಟರ ಸೈಕಲನಿಂದ ಬಿದ್ದು ಮೃತ ಪಟ್ಟಿದ್ದಾನೆ ಎಂದು ನನಗೆ ಗೊತ್ತಿದ್ದರೂ ನಾನು ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಈ ಅರ್ಜಿಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ಮಗನ ಸ್ನೇಹಿತರ ಮೋಟರ ಸೈಕಲ ನನ್ನ ಮಗನ ಮೋಟರ ಸೈಕಲ ಡಿಕ್ಕಿ ಪಡಿಸಿತು ಎಂದು ಸುಳ್ಳಾಗಿ ಪ್ರತಿಪಾದಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 15 ಹೇಳಿಕೆ ಕೊಟ್ಟ ಸಾಕ್ಷಿದಾರನ್ನು ವಿಚಾರಣೆ ಮಾಡಲು ತೊಂದರೆ ಇಲ್ಲಾ ಎಂದರೆ ನಿಜ. ನನ್ನ ಪ್ರಭಾವ ಬೀರಿ ಪೊಲೀಸರ ಜೊತೆ ಶ್ಯಾಮೀಲು ಆಗಿ ನಾನು ಸುಳ್ಳು ದೋಷಾರೋಪಣ ಪತ್ರ ಸಲ್ಲಿಸುವುದಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಿತ್ರದುರ್ಗದ ಜೆ ಎಮ್ ಎಫ ಸಿ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಆಗಿದೆಯೇ ಇಲ್ಲವೇ ಎಂದು ನನಗೆ ಗೊತ್ತಿಲ್ಲ.

ನನ್ನ ಮಗನ ಸ್ನೇಹಿತರು ಯಾರು ನನ್ನ ಮಗನ ಮೋಟರ ಸೈಕಲಿಗೆ ಡಿಕ್ಕಿ ಮಾಡದೆ ಇದ್ದುದರಿಂದ ಎದುರುದಾರರು ಯಾರು ಪರಿಹಾರದ ಹಣ ಕೊಡಲು ಭಾಧ್ಯಸ್ಥರು ಅಲ್ಲಾ ಎಂದರೆ ಸರಿಯಲ್ಲ. ನಾನು ನನ್ನ ಮಗ ಕೆಲಸ ಮಾಡುವ ಕಂಪನಿಗೆ ಈ ಅಪಘಾತದ ಬಗ್ಗೆ ಲಿಖಿತ ಮಾಹಿತ ಕೊಟ್ಟಿಲ್ಲ. ಈ ಅಪಘಾತವು ನನ್ನ ಮಗನ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿದ್ದ ಕಾರಣ ನಾನು ಅಪಘಾತದ ಲಿಖಿತ ಮಾಹಿತಿಯನ್ನು ಕಂಪನಿಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಪೊಲೀಸರು ದೋಷಾರೋಪತ ಪತ್ರದ ಜೊತೆ ಸಲ್ಲಿಸಿದ ಕೆಲವು ಕಾಗದ ಪತ್ರಗಳನ್ನು ನಾನು ನಾಯಾಲಯಕ್ಕೆ ಹಾಜರು ಮಾಡದೆ ಮುಚ್ಚಿ ಇಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಸತ್ಯವನ್ನು ಮರೆ ಮಾಚಲು ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಮತ್ತು ಅರ್ಜಿ ಸುಳ್ಳು ಎಂದು ಗೊತ್ತಾಗುತ್ತದೆ ಎಂಬ ಕಾರಣಕ್ಕೆ ದೋಷಾರೋಪಣ ಪತ್ರದ ಜೊತೆ ಸಲ್ಲಿಸಿದ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡದೆ ಮುಚ್ಚಿ ಇಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಜೋನಲ್ ಮ್ಯಾನೇಜರ ಆಗುತ್ತಿದ್ದನು ಎಂದು ಆತ ಮುಂದೆ ವಾರ್ಷಿಕ 1 ಕೋಟಿ ಗಳಿಸುತ್ತಿದ್ದನು ಎಂದು ನಿರಾದಾರವಾಗಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ತಿಂಗಳಿಗೆ 59,590/- ರೂಪಾಯಿಯನ್ನು ಸಂಬಳ ಗಳಿಸುತ್ತಿದ್ದನು ಎಂದು ಅರ್ಜಿದಾರರಾದ ನಾವು ನನ್ನ ಮಗನ ಆದಾಯವನ್ನು ಅವಲಂಬಿಸಿದ್ದೇವೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 30 ವರ್ಷದಿಂದ ಗೋಕಾಕದಲ್ಲಿ ವಾಸವಾಗಿದ್ದೇನೆ. ಗೋಕಾಕದಲ್ಲಿ ನ್ಯಾಯಾಲಯ ಇದೆ ಎಂದರೆ ನಿಜ. ನನ್ನ ಮಗನಿಗೆ ಮೋಟರ ಸೈಕಲ ಚಲಾಯಿಸಲು ಡ್ರೈವಿಂಗ ಲೇನಸ್ಸ ಇರಲಿಲ್ಲ ಮತ್ತು ಆ ಮೋಟರ ಸೈಕಲಿಗೆ ಇನ್ಸುರನ್ಸ ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣ ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಎದುರುದಾರರನ್ನು ಈ ಕೇಸಿನಲ್ಲಿ ಸುಳ್ಳಾಗಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ಆ ಕಾರಣ ಎದುರುದಾರರು ನಮಗೆ ಪರಿಹಾರದ ಹಣ ಕೊಡಲು ಭಾಧ್ಯಸ್ಥರು ಅಲ್ಲಾ ಎಂದರೆ ಸರಿಯಲ್ಲ. ನಾನು ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಸುಳ್ಳು ಕಾಗದ ಪತ್ರಗಳನ್ನು ಸೃಷ್ಟಿಸಿ ಹಾಜರು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.